
FirstAmendmentRadio.com
ಫರ್ಸ್ಟ್ ಅಮೆಂಡ್ಮೆಂಟ್ ರೈಟ್ಸ್ ಮೀಡಿಯ ಗ್ರೂಪ್

# ತನಿಖಾ ಜರ್ನಲ್

ಗ್ರೆಗ್ ಆಂಥನಿ ಅವರೊಂದಿಗೆ



## ಮಿನಿಸ್ಟ್ರಿಯನ್ನು ನಾಶ ಮಾಡಲು ವ್ಯಾಟಿಕನ್ ನಾಯಕತ್ವದಲ್ಲಿ ಎನ್‌ಡಬ್ಲ್ಯುಓ ಸಂಚು

ಆಗಸ್ಟ್ 2014

ಹಲವಾರು ವರ್ಷಗಳಿಂದ ನನ್ನ ರೇಡಿಯೊ ಕಾರ್ಯಕ್ರಮಗಳಲ್ಲಿ, ಗುಪ್ತ ಸಂಘಗಳ ಬಗ್ಗೆ ಮತ್ತು ಪರದೆಯ ಹಿಂದೆ ಯಾರು ಎಲ್ಲವನ್ನು ನಿಯಂತ್ರಿಸುತ್ತಿದ್ದಾರೆ ಎಂಬುದರ ಬಗ್ಗೆ ಮಾತನಾಡುವಾಗ ನಾನು ವ್ಯಾಟಿಕನ್ ಮತ್ತು ಅದರ ಎಲ್ಲಾ ಅಂಗಗಳ ದೋಷಗಳನ್ನು ಹೊರಕ್ಕೆ ತರಲು ಪ್ರಯತ್ನಿಸಿದ್ದೇನೆ. ನೀವು ಇಂಟರ್ನೆಟ್‌ನಲ್ಲಿ ಈ ತಾಣಗಳಿಗೆ ಹೋಗಿ, ಕೆಲವರು ಅದನ್ನು ಫ್ರೀಮೇಸನ್ಸ್ ಎನ್ನುತ್ತಾರೆ, ಕೆಲವರು ಸ್ಕಲ್ ಆಂಡ್ ಬೋನ್ಸ್ ಎನ್ನುತ್ತಾರೆ, ಅಥವಾ ಗುಪ್ತ ಸಂಘಗಳ ಸಡಿಲ ಒಕ್ಕೂಟ ಎನ್ನುತ್ತಾರೆ; ಸಿಐಎ, ಮೊಸಾದ್‌ನೊಂದಿಗೆ ಹಲವಾರು ಮತಗಳನ್ನು ಪಡೆಯುತ್ತದೆ. ಅದು ಬ್ರಿಟಿಷ್, ಬ್ಯಾಂಕಿಂಗ್ ಕಾರ್ಟೆಲ್‌ಗಳು, ಮತ್ತು ಸಹಜವಾಗಿಯೆ, ಯೆಹೂದ್ಯರು ಎಂದೂ ಕೂಡ ನಿಮಗೆ ಕೇಳಿಬರುತ್ತದೆ. ಆದರೆ ವ್ಯಾಟಿಕನ್ ಈ ಸಮೀಕರಣದಲ್ಲಿ ಹಾಕಲ್ಪಡುವುದು ಬಹಳ ವಿರಳ. ಹಲವಾರು ಇಂಟರ್ನೆಟ್ ತಾಣಗಳು ಅವರ ನಿಯಂತ್ರಣದಲ್ಲಿರುವುದು ಇದಕ್ಕೆ ಕಾರಣ ಎಂಬುದು ನನ್ನ ನಂಬಿಕೆ. ಮತ್ತು ಉಳಿದವುಗಳಿಗೆ ಮಾಹಿತಿ ಪಡೆಯಲು ಸಾಧ್ಯವಾಗಿಲ್ಲ. ಅದು ಸುಲಭವಲ್ಲ. ನಾನು ಏಳು ವರ್ಷಗಳ ಕಾಲ ರೋಮ್‌ನಲ್ಲಿದ್ದೆ, ಮತ್ತು ವ್ಯಾಟಿಕನ್ ಸಹವಾಸ ಎಂಥದ್ದೆಂದು ಬಹಳ ಚೆನ್ನಾಗಿ ಅರಿವಾಯಿತು ಮತ್ತು ಅಲ್ಲಿ ನಾನು ಬಹಳಷ್ಟು ಕಲಿತೆನು. ಆದ್ದರಿಂದ ನಾನು ಇದಕ್ಕೆ ಆ ರೀತಿಯ ಅನುಭವವನ್ನು ತರುತ್ತಿದ್ದೇನೆ ಮಾತ್ರವಲ್ಲದೆ ನನ್ನ ಶೈಕ್ಷಣಿಕ ಅನುಭವವನ್ನೂ ತರುತ್ತಿದ್ದೇನೆ. ನಾನು ವಿಷಯಗಳನ್ನು ಕಾರ್ಯಸಾಧ್ಯ ದೃಷ್ಟಿಯಿಂದ, ಕಾನೂನಿನ ದೃಷ್ಟಿಯಿಂದ ನೋಡುತ್ತೇನೆ. ನಾನು ಕಾನೂನು ಪದವಿಯನ್ನು ಹೊಂದಿದ್ದೇನೆ, ಮತ್ತು ನಾನು ಬಹಳ ಸಮಯ ಪತ್ರಕರ್ತನೂ ಆಗಿದ್ದೆನು.

ಆದ್ದರಿಂದ ನೀವು ವ್ಯಾಟಿಕನ್ ಅನ್ನು ಸಮೀಕರಣಕ್ಕೆ ತರಲು ಪ್ರಯತ್ನಿಸಿದಾಗ, ಅದು ಬಹಳ ಕಷ್ಟವಾಗುತ್ತದೆ. ಕಥೆಗಳು ನನ್ನನ್ನು ತೊಂದರೆಗಳಲ್ಲಿ ಸಿಕ್ಕಿಹಾಕಿಸುತ್ತಿದ್ದವು. ಯಾರಾದರೂ ಒಬ್ಬ ಪ್ರಮುಖ ವ್ಯಕ್ತಿಯ ಬಗ್ಗೆ ನಾವು ಸ್ವಲ್ಪ ಮಾಹಿತಿಯನ್ನು ಸಂಗ್ರಹಿಸಿದಾಗಲೆಲ್ಲಾ, ಅದು ಆ ವ್ಯಕ್ತಿಯನ್ನು ಈ ಗುಂಪಿಗೆ ಸೇರಿಸಿತು. ನಾನು ಇತರ ರೇಡಿಯೊ ಸ್ಟೇಷನ್‌ಗಳಲ್ಲಿದ್ದಾಗ, ಮತ್ತು ನಾನು, ಆದಿಕಾಂಡದಂತೆ, ಈ ಕಥೆಯ ಮೇಲೆ ಗಮನ ನೀಡಲು ಆರಂಭಿಸಿದಾಗ, ಅಲೆಕ್ಸ್ ಜೋನ್ಸ್ ಇರುವ ದೊಡ್ಡ ರೇಡಿಯೊ ಸ್ಟೇಷನ್‌ಗಳು, ಅವರ ಸೋದರ ರೇಡಿಯೊ ಸ್ಟೇಷನ್‌ನಂತಿರುವ ರಿಪಬ್ಲಿಕ್, “ನೀನು ಈ ಕಥೆಯನ್ನು ಅಲ್ಲಿಗೇ ಏಕೆ ಬಿಡಬಾರದು? ಅದನ್ನು ಇಷ್ಟು ವರದಿ ಮಾಡಬೇಕಾಗಿಲ್ಲ” ಎಂದು ನನಗೆ ಹೇಳಿದರು. ಹಾಗೆ ಮಾಡಬಾರದೆಂದು ನಾನು ನಿರ್ಧರಿಸಿದೆನು, ಮತ್ತು ನಾನು ಈ ಕೆಲಸವನ್ನು ಮಾಡಲು ಸಾಧ್ಯವಾಗಬಹುದಾದ ಏಕೈಕ ಜಾಗಕ್ಕೆ ಬಂದು ಸೇರಿದೆನು, ಅದು ಒಂದು ಕ್ರೈಸ್ತಮತೀಯ ಸ್ಟೇಷನ್ ಆಗಿತ್ತು. ಕಾರಣವೇನೆಂದರೆ, ಕ್ರೈಸ್ತಮತೀಯ ಸ್ಟೇಷನ್‌ಗಳಲ್ಲಿ, ವ್ಯಾಟಿಕನ್, ಬೈಬಲ್ ಪದವನ್ನು ಹೇಗೆ ಕೀಳಾಗಿಸಿದೆ ಮತ್ತು ಎಲ್ಲಾ ಪ್ರೊಟೆಸ್ಟೆಂಟ್ ಚರ್ಚ್‌ಗಳು, ಮತ್ತು ಹಾಗೆಯೆ ಇತರ ಚರ್ಚ್‌ಗಳ ಮೇಲೆ ಕೂಡ, ಅವರ “ಹಟ್ಟಿ”ಯೊಳಗೆ ಸೇರಬೇಕೆಂದು ಹೇಗೆ ಒತ್ತಡ ಹೇರಿದೆ ಎಂಬುದನ್ನು ಪರೀಕ್ಷಿಸಲಾಗುತ್ತಿದೆ.

ಒಳಸಂಚಿನ ತಾಣಗಳು ಎಂದು ಕರೆಯಲ್ಪಡುವ ತಾಣಗಳನ್ನು ಮಾತ್ರವಲ್ಲದೆ, ಇದರ ಬಗ್ಗೆಯೂ ಮಾತನಾಡಿರುವ ಇತರ ಜನರು, ವಿಶ್ವಾಸಾರ್ಹ ಜನರನ್ನು ನಾನು ನಂಬುವಂತೆ ಮಾಡುವ ಮತ್ತು ಇನ್ನೂ ಅನೇಕರು ನಂಬುವಂತೆ ಮಾಡುವ ಸಂಭಾವ್ಯ ಕಾರಣದ ಸಾಕ್ಷಿಯನ್ನು ಕುರಿತಂತೆ ಎಲ್ಲವನ್ನೂ ನಾನು ವಿವರಿಸುವುದಿಲ್ಲ. ಅದು ಹೊರಬೀಳುವುದೇ ಇಲ್ಲ. ವಿಶ್ವಾದ್ಯಂತ ನಡೆಯುತ್ತಿರುವ ಈ ರೈಲು ಧ್ವಂಸವನ್ನು ನಾವು ಮೂಲತಃ ನಿಲ್ಲಿಸಲು ಸಾಧ್ಯವಾಗುವಂತೆ ಅದು ಕಾಲದಲ್ಲಿ ಒಂದು ನಿರ್ಣಾಯಕ ಘಟ್ಟವನ್ನು ತಲುಪುವುದೇ ಇಲ್ಲ ಎಂಬುದೇ ನನ್ನ ಭಯ. ನಾನು ರೈಲು ಧ್ವಂಸ ಎಂದು ಹೇಳಿದಾಗ, ಅದರ ಅರ್ಥ ಯುದ್ಧಗಳು; ಇರಾಕ್ ನಲ್ಲಿ ಏನು ನಡೆಯುತ್ತಿದೆ ನೋಡಿ, ಇದೀಗ ಮಧ್ಯ ಪೂರ್ವ ರಾಷ್ಟ್ರಗಳಲ್ಲಿ ಏನು ನಡೆಯುತ್ತಿದೆ ನೋಡಿ. ಇದು ಇನ್ನೂ ಹದಗೆಡಲಿದೆ ಅಷ್ಟೆ. ಈಗ ನಮ್ಮ ದೇಶವನ್ನು ನೋಡಿದಾಗ, ಸ್ವಾತಂತ್ರ್ಯಗಳನ್ನು ಎಲ್ಲೆಡೆಯಿಂದ ಕಸಿದುಕೊಳ್ಳಲಾಗುತ್ತಿದೆ. ಆರ್ಥಿಕ ಕುಸಿತ ನೋಡುತ್ತಿದ್ದೀರಿ, ಇದು ಒಂದು ರೀತಿಯ ನಿಧಾನ ಸಾವು. ಈಗ ದೊಡ್ಡ ಪ್ರಮಾಣದಲ್ಲಿ ನೀವು 9/11 ನೋಡದಿರಲು ಕಾರಣವೇನೆಂದರೆ ಈಗಿನ ಮೇಲಧಿಕಾರಿಗಳು ಪರಿಸ್ಥಿತಿ ತಮ್ಮ ನಿಯಂತ್ರಣದಲ್ಲಿದೆ ಎಂದು ಭಾವಿಸಿದ್ದಾರೆ ಎಂಬುದು ನನ್ನ ನಂಬಿಕೆ. ಇದು ಮೂವತ್ತು ವರ್ಷಗಳ ಹಿಂದೆ ಇದ್ದ ಅದೇ ದೇಶವಲ್ಲ.

ಈ ಜನರಿಂದ ಹಾನಿಗೊಳಗಾದ ಜನರಿದ್ದಾರೆ, ಪಟ್ಟಿ ಮಾಡಲು ಸಾಧ್ಯವಾಗದಷ್ಟು ಸಂಖ್ಯೆಯಲ್ಲಿ. ಹಲವಾರು ವರ್ಷಗಳಿಂದ ನಾನು ಅವರಲ್ಲಿ ಅನೇಕರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೇನೆ. ನನ್ನ ಮನಸ್ಸಿಗೆ ಬರುವವರಲ್ಲಿ ಇಬ್ಬರು ಗಣ್ಯರಿದ್ದಾರೆ, ಅವರ ಬಗ್ಗೆ ನಾನು ಒಂದು ನಾಟಕ ಬರೆಯಲಿದ್ದೇನೆ, ಒಬ್ಬೊಬ್ಬರಿಗೆ ಒಂದೊಂದು ನಾಟಕ. ಒಬ್ಬರು ಪ್ಯಾಸ್ಟರ್ ಆಗಿದ್ದರು, ಈಗ ಅವರು ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಮತ್ತೊಬ್ಬರು ಟಪರ್ ಸಾಸಿ ಎಂಬ ಲೇಖಕ, ಪತ್ರಕರ್ತ, ಬರಹಗಾರ, ಮತ್ತು ಸಂಗೀತಗಾರ, ಅವರು ರೂಲರ್ಸ್ ಆಫ್ ಈವಿಲ್ ಎಂಬ, ಎಲ್ಲರೂ ಓದಲೇ ಬೇಕಾದ, ಒಂದು ಪುಸ್ತಕವನ್ನು ಬರೆದ ನಂತರ 2007ರಲ್ಲಿ ನಿಧನ ಹೊಂದಿದರು. ಆದಾಗ್ಯೂ, ಸಹಜವಾಗಿಯೆ, ಆ ಪುಸ್ತಕ ವ್ಯಾಪಕವಾಗಿ ವಿತರಣೆಯಾಗಿಲ್ಲ, ಮುಖ್ಯವಾಹಿನಿಯಲ್ಲಿ ಯಾವುದೇ ವೃತ್ತಗಳಲ್ಲಿ ಉಲ್ಲೇಖಿತವಾಗುವುದಿಲ್ಲ, ಮತ್ತು ಹೆಚ್ಚಿನ ವ್ಯಾಟಿಕನ್ ವಿರೋಧಿ ವೆಬ್‌ಸೈಟ್‌ಗಳಲ್ಲಿ ಕೂಡ ಎಂದೂ ಉಲ್ಲೇಖಿತವಾಗುವುದಿಲ್ಲ. ಇದೊಂದು ಬಹಳ ಕುತೂಹಲಕಾರಿ ಪರಿಸ್ಥಿತಿ. ಅದರ ಹಿಂದೆ ಏನೋ ಅಡಗಿದೆ ಎಂದು ನನಗನಿಸಲು ಅದೇ ಕಾರಣವಾಗಿದೆ.

ವ್ಯಾಟಿಕನ್ ಎಂಬ ಈ ಸಂಸ್ಥೆಯ ನಿಜವಾದ ಪರಿಚಯವನ್ನು ಈ ದೇಶದ ಜನರಿಗೆ ಮಾಡಿಸುವಲ್ಲಿ ಪ್ಯಾಸ್ಟರ್ ಟೋನಿ ಅಲಾಮೊ ತನ್ನ ಕಾಲಕ್ಕಿಂತ ಬಹಳ ಮುಂದಿದ್ದರು. ಅವರು ಅದನ್ನು ತನ್ನ ಬೈಬಲ್ ಮಿನಿಸ್ಟ್ರಿಗಳ ಮೂಲಕ ಮಾಡಿದರು. ಅವರು ಈಗ ಕಾರಾಗೃಹದಲ್ಲಿರಲು ಇದೂ ಒಂದು ಕಾರಣ ಎಂದು ನಾನು ನಂಬುತ್ತೇನೆ. ಇದು ಅಸಾಮಾನ್ಯವಲ್ಲ. ಹಲವಾರು ರೋಮನ್ ಕ್ಯಾಥೊಲಿಕ್ ಪಾದ್ರಿಗಳ ಮೇಲೆ ಮಕ್ಕಳ ಮೇಲೆ ಲೈಂಗಿಕ ಅಪರಾಧಗಳು ಮತ್ತು ಅಂಥದ್ದೇ ಇತರ ಆರೋಪಗಳನ್ನು ಹೊರಿಸಲಾಗುತ್ತಿದೆ. ಟೋನಿ ಅವರ ಮೇಲೆಯೂ ಅದೇ ಆರೋಪವನ್ನು ಹೊರಿಸಲಾಯಿತು. ಅವರನ್ನು ಚೆನ್ನಾಗಿ ಅರಿತಿದ್ದ ಅವರ ಸುತ್ತಲಿನ ಹಲವಾರು ಜನರು ಅವರ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆ ಎಂದು ಭಾವಿಸುತ್ತಾರೆ. ಮತ್ತು ವ್ಯಾಟಿಕನ್‌ನಿಂದ ಹಾನಿಗೊಳಗಾಗಿರುವ ಜನರ ಇತರ ಕಥೆಗಳನ್ನು ನೋಡಿದರೆ, ಅವುಗಳನ್ನು ನೀವು ಪರಿಗಣಿಸಲೇಬೇಕಾಗುತ್ತದೆ. ನಾನು ನಿಮ್ಮನ್ನು ಅದನ್ನೆ ಮಾಡಲು ಕೇಳಿಕೊಳ್ಳುತ್ತಿದ್ದೇನೆ. ವ್ಯಾಟಿಕನ್ ನ ಕಾರ್ಯವಿಧಾನ, ಅವರ ಘನತೆ ಕುಗ್ಗಿಸುವವರೊಂದಿಗೆ ವ್ಯಾಟಿಕನ್ ಹೆಚ್ಚಾಗಿ ವ್ಯವಹರಿಸುವ ರೀತಿ ಎಂದರೆ, ತಾವು ಎದುರಿಸುತ್ತಿರುವ ಅವೇ ಅಪರಾಧಗಳ ಆರೋಪಗಳನ್ನು ಅವರ ಮೇಲೆ ಹೊರಿಸುವುದು, ಅವರನ್ನು ಅಪಾಯಕಾರಿ ಸ್ಥಿತಿಗೆ ತಳ್ಳುವುದು ಮತ್ತು ಅವರ ವಿರುದ್ಧ ಅತ್ಯಂತ ಕಟ್ಟಾ ವಕ್ತಾರರಾದ ಜನರನ್ನು ಆಪಾದಿಸುವುದು.

ಆದ್ದರಿಂದ ಟೋನಿಯವರ ವ್ಯಾಟಿಕನ್‌ನ ಕಠಿಣ ಟೀಕೆ, ಅವರ ಸ್ಥಿತಿ, ಎಲ್ಲೆಡೆ ಹಲವಾರು ಮಿನಿಸ್ಟ್ರಿಗಳೊಂದಿಗೆ ಅವರ ವ್ಯಾಪಾರ ಯಶಸ್ಸು, ಈ ಪದವನ್ನು ಅವರು ಹೇಗೆ ಹರಡುವರು ಎಂಬುದು ಬಹಳ ಪರಿಣಾಮಕಾರಿಯಾಗಿತ್ತು ಎಂದು ನನಗನಿಸುತ್ತದೆ. ಅವರು ಕರಪತ್ರಗಳನ್ನು ಮಾಡುತ್ತಿದ್ದರು, ಅವರು ಮಾತನಾಡುತ್ತಿದ್ದರು, ಅವರು ರೇಡಿಯೊ ಸ್ಟೇಷನ್‌ಗಳನ್ನು ಹೊಂದಿದರು, ಅವರು ಇಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿಯೂ ಕಿರುತರಂಗದ ಸ್ಟೇಷನ್‌ಗಳಿಗೆ ಹಣ ಕಟ್ಟಿ, ದಿನವೆಲ್ಲಾ ರೇಡಿಯೊ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು, ಮತ್ತು ಅದು ಬಹಳ ಪರಿಣಾಮಕಾರಿಯಾಗಿತ್ತು. ಆದ್ದರಿಂದ ಅವರ ಬಾಯಿ ಮುಚ್ಚಿಸಲು ವ್ಯಾಟಿಕನ್ ದಾರಿ ಹುಡುಕುತ್ತಿತ್ತು ಎಂದು ನನಗೆ ಮನದಟ್ಟಾಗಿದೆ. ಮತ್ತು ಇದು ಟೋನಿಯವರೊಂದಿಗೆ ನಡೆದ ಘಟನೆ ಎಂಬ ಬಲವಾದ ಸಾಧ್ಯತೆಯನ್ನು ನಾವು ನೋಡಬೇಕು.



ನಾನು, ಈಗ ನಮ್ಮೊಂದಿಗೆ ಇಲ್ಲದ ಆಲ್ಬರ್ಟೊ ರಿವೆರ ಎಂಬ ಒಬ್ಬ ವ್ಯಕ್ತಿಯಲ್ಲಿ ಬಹಳ ಆಸಕ್ತನಾಗಿದ್ದಾಗ ಮೊದಲ ಬಾರಿಗೆ ಟೋನಿಯವರ ಸಂಪರ್ಕಕ್ಕೆ ಬಂದೆನು. ಆದರೆ ಅವರು ಸಂಪ್ರದಾಯ ಮುರಿದ ಉನ್ನತ-ಮಟ್ಟದ ಜೆಸ್ಯುಟ್ ಆಗಿದ್ದರು ಮತ್ತು ಅವರು ಚರ್ಚ್‌ಗಳೊಳಗೆ ಹೇಗೆ ನುಸುಳುತ್ತಾರೆ ಮತ್ತು ವ್ಯಾಟಿಕನ್ ಅನ್ನು ಕ್ರಿಸ್ತವಿರೋಧಿ ಎಂದು ಸೂಚಿಸುವ ಬೈಬಲ್ ಸತ್ಯವು ಉಪದೇಶಿಸಲ್ಪಡುವುದನ್ನು ನಿಲ್ಲಿಸುವಂತೆ ಅವರು ಜನರೊಂದಿಗೆ, ಇತರ ಪ್ಯಾಸ್ಟರ್‌ಗಳೊಂದಿಗೆ ಇದೇ ರೀತಿಯ ವ್ಯವಹಾರವನ್ನು ಹೇಗೆ ನಡೆಸುತ್ತಾರೆ ಮತ್ತು ಅವರನ್ನು ಹೇಗೆ ಹೆದರಿಸುತ್ತಾರೆ ಎಂದು ಜಗತ್ತಿಗೆ ಹೇಳಿದರು. ಹಲವಾರು ವರ್ಷಗಳ ಹಿಂದೆ, 30 ಮತ್ತು 40ರ ದಶಕಗಳಲ್ಲಿ ಕೂಡ, ಹಲವಾರು ಪ್ರೊಟೆಸ್ಟೆಂಟ್ ಚರ್ಚ್‌ಗಳು ಮೃಗದ ವಿರುದ್ಧ, ಏಳು ಬೆಟ್ಟಗಳ ಮೇಲೆ ಕುಳಿತಿರುವ ಪಟ್ಟಣದ ವಿರುದ್ಧ ಮಾತನಾಡುತ್ತಿದ್ದವು. ಮತ್ತು ಈ ಅಪಾಯಕಾರಿ ಹಾಗೂ ವಂಚಿಸುವ ಕಪಟ ಚರ್ಚ್‌ನೊಂದಿಗೆ ಸೇರಿಕೊಳ್ಳುವುದರ ವಿರುದ್ಧ ಅವರು ಮಾತನಾಡುತ್ತಿದ್ದರು. ಆ ಅರ್ಥದಲ್ಲಿ ಅಮೇರಿಕ ಕ್ಯಾಥೊಲಿಕ್ ಆಗಿರಲಿಲ್ಲ. ಆದರೆ ಇಂದಿನ ಅಮೇರಿಕ ಕ್ಯಾಥೊಲಿಕ್ ದೇಶವಾಗಿದೆ ಎಂದು ಹೇಳಬಹುದು. ಅದರ ನಾಯಕರು ಎಲ್ಲರೂ ಕ್ಯಾಥೊಲಿಕ್. ಈಗ ಅನೇಕ ಜನರು ಯಾವುದೇ ಧರ್ಮವನ್ನು ಅನುಸರಿಸುವುದಿಲ್ಲ, ಮತ್ತು ಅದು ಕೂಡ ವ್ಯಾಟಿಕನ್ ಯೋಜನೆಯ ಒಂದು ಭಾಗವಾಗಿದೆ. ನ್ಯೂ ಏಜ್ ಮೂವ್ಮೆಂಟ್, ಅದನ್ನು ಒಬ್ಬ ಜೆಸ್ಯುಟ್ ಪಾದ್ರಿಯಾದ ಪಿಯರ್ ಡಿ ಚಾರ್ಡಿನ್ ಪ್ರಾರಂಭಿಸಿದರು ಎಂದು ಪತ್ತೆಹಚ್ಚಬಹುದು, ಮತ್ತು ಅವರ ಉದ್ದೇಶವೇನಿತ್ತು ಎಂದು ನೀವು ನೋಡಬಹುದು. ಹೀಗೆ ವ್ಯಾಟಿಕನ್, ಕೇವಲ ನಿಮ್ಮ ಸರ್ಕಾರದ ಮತ್ತು ನಿಮ್ಮ ಪಾಕೆಟ್‌ಬುಕ್ ಮಾತ್ರವಲ್ಲ, ನಿಮ್ಮ ಮನಸ್ಸು, ದೇಹ ಮತ್ತು ಆತ್ಮಗಳ ನಿಯಂತ್ರಣ ಅಧಿಕಾರವನ್ನು ಪಡೆಯಲು ಹಲವಾರು ವಿವಿಧ ಕಾರ್ಯತಂತ್ರಗಳನ್ನು ಬಳಸುತ್ತಿದೆ. ಅದೇ ಇಲ್ಲಿರುವ ಉದ್ದೇಶ.

ಆಲ್ಬರ್ಟೊ ರಿವೆರ ಬಗ್ಗೆ ಒಂದು ಕಥೆ ಮಾಡುತ್ತಿದ್ದಾಗ, ಅವರು ಅಮೇರಿಕಗೆ ಬಂದಾಗ, ಅವರನ್ನು ಬರಮಾಡಿಕೊಂಡು ತನ್ನ ಮಿನಿಸ್ಟ್ರಿಗಳಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟವರಲ್ಲಿ, ಮತ್ತು ಜೆಸ್ಯುಟ್‌ಗಳ ಬಗ್ಗೆ ಎಲ್ಲಾ ವಿಷಯಗಳ ಒಳಗಿನ ಕಥೆಯ ಬಗ್ಗೆ ಅವರು ಜನರಿಗೆ ಏನು ಹೇಳುತ್ತಿದ್ದರು ಎಂಬುದನ್ನು ಕಲಿಯುವಲ್ಲಿ ಟೋನಿ ಮೊದಲನೆಯವರಾಗಿದ್ದರು ಎಂದು ನಾನು ಕಂಡುಹಿಡಿದೆನು.

ಕಳೆದ 40 ರಿಂದ 50 ವರ್ಷಗಳಿಂದ, ಟೋನಿ, ನಮ್ಮ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ವ್ಯಾಟಿಕನ್ ನ ಪ್ರಭಾವ ಮತ್ತು ನಮ್ಮ ರಾಜಕೀಯ ವ್ಯವಸ್ಥೆಯೊಳಗೆ ಸೇರಿಕೊಳ್ಳುವ ಅದರ ಪೈಶಾಚಿಕ ಮಾರ್ಗದ ಬಗ್ಗೆ ನಮಗೆ ಸತ್ಯವನ್ನೆ ಹೇಳುತ್ತಿದ್ದಾರೆ. ಈ ವ್ಯಾಟಿಕನ್ ವಿರೋಧಿ ಕಥೆಯೊಂದಿಗೆ ಟೋನಿಯವರು ಸಹಸ್ರಾರು ಜನರನ್ನು ತಲುಪುತ್ತಿದ್ದಾರೆ. ಈ ಕಥೆಯನ್ನು ಹೇಳಲೇಬೇಕಾಗಿದೆ ಏಕೆಂದರೆ ಟೋನಿ ಹೇಳುತ್ತಿರುವುದು ನಿಜವೆಂದು ತೋರಿಸುವ ಸಂಭಾವ್ಯ ಕಾರಣದ ಸಾಕ್ಷಿ ಇದೆ, ಮತ್ತು ಅದಕ್ಕಾಗಿ ಅವರಿಗೆ ಕಿರುಕುಳ ಕೊಡಲಾಗುತ್ತಿದೆ.

ಟೋನಿ ಅಲಾಮೊ 2008ರಿಂದ 175 ವರ್ಷಗಳ ಅವಧಿಗೆ ಲೈಂಗಿಕ ಶೋಷಣೆಯೆಂದು ಸ್ವಪ್ಪನೆ ಮಾಡಲಾದ ಸುಳ್ಳು ಆರೋಪದ ಮೇಲೆ ಕಾರಾಗೃಹದಲ್ಲಿದ್ದಾರೆ. ಆರ್ಕನ್ಸಾಸ್‌ನಲ್ಲಿ 2008ರ ದಾಳಿ ಟೋನಿ ಅಲಾಮೊ ಕ್ರೈಸ್ತಮತೀಯ ಮಿನಿಸ್ಟ್ರಿಗಳ ಮೇಲೆ ವಾಕೊ ರೀತಿಯ ದಾಳಿಯಂತಿತ್ತು. ನಾನು, ಅದರ ಬಗ್ಗೆ ಬಹಳಷ್ಟು ತಿಳಿದಂತಿದ್ದ ಮುಖ್ಯವಾಹಿನಿಯ ಮಾಧ್ಯಮದಿಂದ ಅದರ ಬಗ್ಗೆ ಕೇಳಿದೆನು. ಹಲವಾರು ವಿವಿಧ ರಾಜ್ಯಗಳಲ್ಲಿ ಚರ್ಚ್‌ಗಳನ್ನು ಹೊಂದಿದ್ದ ಈ ಬಹಳ ಯಶಸ್ವಿ ಮಿನಿಸ್ಟ್ರಿಯನ್ನು ಮುಚ್ಚುವುದು ಮಾತ್ರವಲ್ಲದೆ ಟೋನಿಯವರ ಬೆನ್ನಟ್ಟುವುದೂ ಅವರ ಉದ್ದೇಶವಾಗಿತ್ತು ಎಂದು ನನಗನಿಸುತ್ತದೆ.

ಅವರು ಅದನ್ನು ಈ ಮಿನಿಸ್ಟ್ರಿಯ ಮಕ್ಕಳ ಮೇಲೆ ದಾಳಿ ಮಾಡುವ ರೀತಿಯಲ್ಲಿ ಮಾಡಿದರು. ದಾಳಿಯ ಬಗ್ಗೆ ಒಬ್ಬ ಬ್ಲಾಗರ್ ಹೀಗೆಂದರು: "ರಾಜ್ಯ ಮತ್ತು ಫೆಡರಲ್ ಕಾನೂನು ಅಧಿಕಾರಿಗಳು ಟೋನಿ ಅಲಾಮೊ ಮಿನಿಸ್ಟ್ರಿಗಳೊಳಗೆ ಮುಗಿಬಿದ್ದಾಗ, ಪ್ರಮುಖ ಸುದ್ದಿ ಮಾಧ್ಯಮದ ಹೆಚ್ಚಿನವರು ಅಲ್ಲದಿದ್ದರೂ, ಅನೇಕರು ಆರ್ಕನ್ಸಾಸ್ ನ ಟೆಕ್ಸಾರ್ಕ್ಯಾನದಲ್ಲಿದ್ದರು. ಇವೆಲ್ಲವೂ ನಡೆಯುವುದನ್ನು ನೋಡುತ್ತಿದ್ದರಾದರೂ, ಎಲ್ಲವೂ ಪ್ರಾರಂಭವಾದ ಬಹಳ ನಂತರವಷ್ಟೆ ಅದರ ಬಗ್ಗೆ ಬರೆಯಲು ಆರಂಭಿಸಿದರು. "ಆದ್ದರಿಂದ ಅವರಿಗೆ ಇದರ ಬಗ್ಗೆ ಎಲ್ಲವೂ ತಿಳಿದಿತ್ತು. ದಾಳಿಯು ಅಕ್ಟೋಬರ್ 2008ಕ್ಕೆ ನಿಗದಿಪಡಿಸಲಾಗಿತ್ತು, ಆದರೆ ಈ ದಾಳಿ ಸೆಪ್ಟೆಂಬರ್‌ನಲ್ಲಿ ನಡೆಯಿತು.

**...ಅವರು ನಿಮಗೆ ಏನು ಮಾಡಬಹುದು ಎಂಬುದನ್ನು ನಿಮಗೆ ತೋರಿಸಲು ಇದೊಂದು ನಿರ್ಣಾಯಕ ಪ್ರಕರಣವಾಗಿತ್ತು.**

ದಾಳಿಯ ಮುನ್ನಾದಿನವಾದ ಶುಕ್ರವಾರದಂದು, ಯುಎಸ್ ಅಟಾರ್ನಿಯ ಕಚೇರಿಯಲ್ಲಿ ಯಾರೋ ಒಬ್ಬರು ರಾಷ್ಟ್ರಾದ್ಯಂತ 50ಕ್ಕೂ ಹೆಚ್ಚು ಮಾಧ್ಯಮ ಔಟ್‌ಲೆಟ್‌ಗಳಿಗೆ ದಾಳಿಯ ಬಗ್ಗೆ ಅನುದ್ದೇಶಪೂರ್ವಕವಾಗಿ ಇಮೇಲ್ ಕಳುಹಿಸಿದರು. ಆ ಇಮೇಲ್‌ಅನ್ನು ದಾಳಿ ನಡೆಯಬೇಕೆಂದು ನಿಗದಿಪಡಿಸಲಾಗಿದ್ದ ಹಲವಾರು ವಾರಗಳ ಮುಂಚೆಯೆ ಕಳುಹಿಸಲಾಗಿತ್ತು. ಟೋನಿಯವರು ನ್ಯಾಯಯುತ ವಿಚಾರಣೆಯನ್ನು ಎದುರಿಸುವ ಮುನ್ನವೆ ಅವರನ್ನು ಅಪರಾಧಿ ಎಂದು ತೀರ್ಮಾನಿಸಲು ಹೀಗೆ ಮಾಡಲಾಯಿತು ಎಂದು ನನಗನಿಸುತ್ತದೆ.

ಫ್ರ್ಯಾಂಕ್ ಎಲ್. ಎಂಬ ಒಬ್ಬ ಬ್ಲಾಗರ್ ಹೀಗೆಂದರು: "ಗುಟ್ಟು ರಟ್ಟಾದ ನಂತರ, ಕಾನೂನು ಅಧಿಕಾರಿಗಳು ತಮ್ಮ ವೇಳಾಪಟ್ಟಿಯನ್ನು ಮುಂದಕ್ಕೆ ತಂದರು. ಕಥೆಯನ್ನು ಶನಿವಾರದ ಮುದ್ರಣದಲ್ಲಿ ಪ್ರಕಟಿಸುವುದೋ ಅಥವಾ ಒಂದೆರಡು ದಿನ ಕಾಯಬೇಕೋ ಎಂದು ಸುದ್ದಿಪತ್ರಿಕೆಗಳು ನಿರ್ಧರಿಸಬೇಕಿತ್ತು. ವರದಿಯ ಪ್ರಕಾರ, ಚರ್ಚ್‌ನಲ್ಲಿ ಮಕ್ಕಳಿದ್ದುದರಿಂದ, ಮತ್ತು ಮಕ್ಕಳ ಶೋಷಣೆಯ ಆಪಾದನೆಗಳ ಕಾರಣ, ರಾಜ್ಯದಲ್ಲಿನ ಪ್ರತಿಯೊಂದು ಸುದ್ದಿ ಸಂಸ್ಥೆ, ದಾಳಿ ನಿಜವಾಗಿಯೂ ಪ್ರಾರಂಭವಾಗುವವರೆಗೆ ಅದರ ಬಗ್ಗೆ ಸ್ವಯಂಪ್ರೇರಣೆಯಿಂದ ಬರೆಯಲಿಲ್ಲ." ಅವರು ಇದರ ಬಗ್ಗೆ ಮಾಧ್ಯಮವನ್ನು ಪ್ರಚೋದಿಸಿದರು; ನಿಖರವಾಗಿ ಏನು ನಡೆಯುತ್ತಿದೆ ಎಂದು ಯಾರಿಗೂ ತಿಳಿದಿರಲಿಲ್ಲ. SWAT-ನಂತಹ ರೀತಿಯಲ್ಲಿ ಈ ದಾಳಿ ನಡೆದ ಕೂಡಲೆ ಅದೊಂದು ಹಾನಿಕಾರಕ ಅಪರಾಧ ನಿರ್ಣಯವಾಗುತ್ತದೆ. ಮಕ್ಕಳು ಹೊರಗೆ ಆಟವಾಡುತ್ತಿದ್ದಾಗ, ಟೋನಿಯವರನ್ನು ಬಂಧಿಸಲು ಪ್ರಯತ್ನಿಸಲು ಸ್ವಾಟ್ ತಂಡವು ಗನ್‌ಗಳು ಮತ್ತು ರೈಫಲ್‌ಗಳೊಂದಿಗೆ ಬಂದಾಗ, ಮಕ್ಕಳು ಹೆದರಿಹೋದರು. ಟೋನಿ ಅಲ್ಲಿ ಇರಲೇ ಇಲ್ಲ, ಆ ಸಮಯದಲ್ಲಿಅವರು ಲಾಸ್ ಏಂಜಲೀಸ್‌ನಲ್ಲಿದ್ದರು ಎಂದು ಸ್ವಾಟ್ ತಂಡಕ್ಕೆ ತಿಳಿದಿತ್ತು. ಚರ್ಚ್ ಆವರಣದಲ್ಲಿ ಯಾವುದೇ ಶಸ್ತ್ರಾಸ್ತ್ರಗಳು ಅಥವಾ ಇತರ ವಸ್ತುಗಳು ಇದ್ದವು ಎಂಬುದಕ್ಕೆ ಯಾವುದೇ ಸೂಚನೆಗಳಿರಲಿಲ್ಲ. ಅದೊಂದು ಶಾಂತಿಯುತ ಸಂಸ್ಥೆಯಾಗಿತ್ತು, ಮತ್ತು ಅವರು ಟೋನಿಯವರನ್ನು ಬಂಧಿಸಲು ಬಯಸಿದ್ದರೆ, ಅದನ್ನು ಶಾಂತ ರೀತಿಯಲ್ಲಿ ಮಾಡಬಹುದಿತ್ತು, ಆದರೆ ಇದೊಂದು ಮಾಧ್ಯಮ ಪ್ರದರ್ಶನವಾಗಬೇಕಿತ್ತು, ಮತ್ತು ನ್ಯಾಯಯುತ ವಿಚಾರಣೆಯನ್ನು ಎದುರಿಸುವ ಮುನ್ನವೆ ಅವರನ್ನು ಅಪರಾಧಿ ಎಂದು ನಿರ್ಣಯಿಸಲು ಇದೊಂದು ಮಾರ್ಗವಾಗಿತ್ತು.

ಆ ದಿನ ಆರು ಮಕ್ಕಳನ್ನು ರಾಜ್ಯದ ಸುಪರ್ದಿಯಲ್ಲಿ ಇರಿಸಲಾಯಿತು. ಮರುದಿನ, ಆ ಕಥೆ ಎಲ್ಲಾ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಒಂದು ರಾಷ್ಟ್ರ-ವ್ಯಾಪಿ ದಸ್ತಗಿರಿ, ಮತ್ತು ಶ್ರೀ ಅಲಾಮೊ ಆಗಲೆ ಅಪರಾಧಿ ಎಂದು ತೀರ್ಮಾನಿಸಲ್ಪಟ್ಟಿದ್ದರು. ಈ ಕಥೆಯನ್ನು ಓಪ್ರಾ ವಿನ್ಫ್ರಿ ಕಾರ್ಯಕ್ರಮದಲ್ಲಿ ಮತ್ತು ಕೆಲವು ಅತಿ ದೊಡ್ಡ ಅಪರಾಧ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಲಾಯಿತು.

ಒಬ್ಬ ಅಟಾರ್ನಿಯವರ ದೃಷ್ಟಿಯಿಂದ, ಅವರಿಗೆ ಅಲ್ಲಿ ಹೆಚ್ಚು ಪುರಾವೆಗಳಿರಲಿಲ್ಲ, ಮತ್ತು ಅವರ ಬಳಿ ಇದ್ದುದು ದೋಷಪೂರಿತವಾಗಿದ್ದಿರಬಹುದು. ನೀವು ಕ್ಯಾಥೊಲಿಕ್ ಚರ್ಚ್ ಮತ್ತು ವ್ಯಾಟಿಕನ್ ವಿರುದ್ಧ ಎದ್ದು ನಿಂತರೆ ಅವರು ನಿಮಗೆ ಏನು ಮಾಡಬಹುದು ಎಂಬುದನ್ನು ನಿಮಗೆ ತೋರಿಸಲು ಇದೊಂದು ನಿರ್ಣಾಯಕ ಪ್ರಕರಣವಾಗಿತ್ತು. ಯುನೈಟೆಡ್ ಸ್ಟೇಟ್ಸ್ ನಲ್ಲಿರುವ ಆಷಾಢಭೂತಿತನ ಮತ್ತು ಇಬ್ಬಗೆ ನೀತಿಯನ್ನು ನೋಡಿ - ಕೆನಡ ಮತ್ತು ಐರ್ಲೆಂಡ್‌ನಲ್ಲಿ ಶಾಲಾ ಮಕ್ಕಳಿಗಾದ ಗತಿಯ ಬಗ್ಗೆ ಮತ್ತು ವಿಶ್ವದೆಲ್ಲೆಡೆಯ ಚಿತ್ರಹಿಂಸೆ ಮತ್ತು ನಿಂದನೆಗಳ ಬಗ್ಗೆ ಎಷ್ಟೊಂದು ಪುರಾವೆಗಳಿವೆ - ಮತ್ತು ನಾವು ಇನ್ನೂ ಈ ಚರ್ಚ್ ನಡೆಯಲು ಅವಕಾಶ ಕೊಡುತ್ತಿದ್ದೇವೆಯೆ? ಅವರ ಬಳಿ ಹಣ ಮತ್ತು ಅಧಿಕಾರ ಮತ್ತು ನಮ್ಮ ಸರ್ಕಾರದ ನಿಯಂತ್ರಣವಿದೆ, ಆದ್ದರಿಂದ ಅವರು ಮಕ್ಕಳ ಶೋಷಣೆಯನ್ನು ನಡೆಸಿ ಪಾರಾಗಬಹುದು. ನೀವು ಅಲಾಮೊ ಅವರ ಧ್ವನಿಯಷ್ಟು ಗಟ್ಟಿಯಾದ ಧ್ವನಿಯನ್ನು ಹೊಂದಿದ್ದರೆ, ಅವರು ತಮ್ಮ ಅಪರಾಧಗಳನ್ನೆ ನಿಮ್ಮ ಮೇಲೆ ಹೊರಿಸಿ ನಿಮ್ಮ ಬೆನ್ನಟ್ಟಬಹುದು ಮತ್ತು ಜನರಿಂದ ಸುಳ್ಳು ಸಾಕ್ಷಿ ಹೇಳಿಸಲು ಮಾಧ್ಯಮವನ್ನು, ಎಫ್‌ಬಿಐ ಅನ್ನು, ಕಾನೂನನ್ನು, ಮತ್ತು ಲಂಚವನ್ನು ಬಳಸಬಹುದು, ಮತ್ತು ಬಲವಂತಪಡಿಸಬಹುದು. ಆದರೆ ಅದೇ ಜನರು ನಂತರ ತಮ್ಮ ಸಾಕ್ಷಿಯನ್ನು ಬಹಿರಂಗವಾಗಿ ಹಿಂತೆಗೆದುಕೊಂಡರು.

ಟೋನಿ 80 ವರ್ಷದವರಾಗಿದ್ದಾರೆ, ಕುರುಡರಾಗಿದ್ದಾರೆ ಮತ್ತು ಕಾರಾಗೃಹದಲ್ಲಿದ್ದಾರೆ. ಬಹುಪಾಲು 50 ವರ್ಷಗಳಿಂದ ಅವರು ಟೋನಿಯವರನ್ನು ಬಂಧಿಸಲು ಪ್ರಯತ್ನಿಸುತ್ತಿದ್ದರು ಎಂದು ಟೋನಿಯವರು ಕಾರಾಗೃಹದಿಂದ ಹೇಳಿದರು. "ಮೊದಲು, ನಾವು ಕಮ್ಯೂನಿಸ್ಟರು ಎಂದು ಅವರು ಆಪಾದಿಸಿದರು. ನಮ್ಮ ಸಂಸ್ಥೆಯನ್ನು ಮುಚ್ಚಲು ಮತ್ತು ನನ್ನ ಮಡದಿ ಸೂಸನ್ ಮತ್ತು ನಾನು ದೇವರ ಪದದ ಬಗ್ಗೆ ಸತ್ಯವನ್ನು ಉಪದೇಶಿಸುವುದನ್ನು ನಿಲ್ಲಿಸಲು ಅವರು ನಮಗೆ ಮತ್ತು ನಮ್ಮ ಸದಸ್ಯರಿಗೆ ಎಡೆಬಿಡದೆ ಕಿರುಕುಳ ಕೊಟ್ಟರು. ನಂತರ ನಾವು ವ್ಯಾಕೊ ಆಗಬೇಕೆಂದು ಅವರು ಬಯಸಿದರು, ಮತ್ತು ನಾವು ಒಂದು ಅಪಾಯಕಾರಿ ಶಸ್ತ್ರಸಜ್ಜಿತ ಕುಪಂಥ ಎಂದು ಆಪಾದಿಸುತ್ತಲೇ ಇದ್ದರು. ನಂತರ ನನ್ನ ಮೇಲೆ ಮಕ್ಕಳ ಮೇಲೆ ದೌರ್ಜನ್ಯ ನಡೆಸಿದೆನೆಂಬ ಆರೋಪ ಹೊರಿಸಿದರು, ಆ ಆರೋಪವನ್ನು ಕೊನೆಗೂ ಲಾಸ್

ಏಂಜಲೀಸ್ ಡಿಸ್ಟ್ರಿಕ್ಟ್ ಅಟಾರ್ನಿ ತಳ್ಳಿ ಹಾಕಿದರು. ನಂತರ ಒಬ್ಬ ಫೆಡರಲ್ ನ್ಯಾಯಾಧೀಶರನ್ನು ಅಪಹರಿಸಲು ಬೆದರಿಕೆ ಒಡ್ಡಿದ ಆರೋಪ ಹೊರಿಸಿದರು. ಜೂರಿ ನನ್ನನ್ನು ನಿರಪರಾಧಿ ಎಂದು ಘೋಷಿಸಿತು. ಅಸ್ತಿತ್ವದಲ್ಲಿರದ ವರಮಾನದ ಮೇಲೆ ತೆರಿಗೆಗಳನ್ನು ಕಟ್ಟದಿರುವ ಸುಳ್ಳು ಪ್ರಸಂಗವನ್ನು ಸೃಷ್ಟಿಸಲು ಐಆರ್‌ಎಸ್ ಅನ್ನು ಬಳಸಲಾಯಿತು. ನನ್ನ ವಿರುದ್ಧ ಸಾಕ್ಷಿ ಹೇಳದಿದ್ದಲ್ಲಿ, ಐಆರ್‌ಎಸ್ ಗಾಗಿನ ಸಾಕ್ಷಿಗಳನ್ನು ಬೆದರಿಸಲಾಯಿತು. ಅಡಗಿಸಿಟ್ಟಿದ್ದೇನೆ ಎಂದು ನನ್ನ ಮೇಲೆ ಆಪಾದನೆ ಹೊರಿಸಿದ್ದ ದಸ್ತಾವೇಜುಗಳು ಐಆರ್‌ಎಸ್ ನ ವಶದಲ್ಲಿದ್ದವು. ತೆರಿಗೆ ಪ್ರತಿಭಟನಕಾರನಾಗಿದ್ದ ನನ್ನ ವಕೀಲ ಜೆಫ್ ಡಿಕ್‌ಸ್ಟೀನ್ ಅನ್ನು ನನ್ನನ್ನು ಹಣಕ್ಕಾಗಿ ಬಿಟ್ಟುಕೊಡುವ ಅಥವಾ ಸ್ವತಃ ಕಾರಾಗೃಹ ಸೇರುವ ಪರಿಸ್ಥಿತಿಗೆ ತಳ್ಳಲಾಯಿತು. ನನಗೆ 6 ವರ್ಷದ ಶಿಕ್ಷೆ ವಿಧಿಸಲಾಯಿತು, ಮತ್ತು ಒಳ್ಳೆಯ ನಡವಳಿಕೆಯಿಂದಾಗಿ, 1998ರಲ್ಲಿ ನಾಲ್ಕು ವರ್ಷಗಳ ನಂತರ ಹೊರಬಂದೆನು. ಎಫ್‌ಬಿಐ ಎಡೆಬಿಡದೆ ನಿರಂತರಾಗಿ ನನ್ನನ್ನು ತನಿಖೆ ಮಾಡುವುದನ್ನು ಮುಂದುವರಿಸಿತು. ಕೊನೆಗೂ, 2008ರಲ್ಲಿ, ಹಲವಾರು ವರ್ಷಗಳ ಹಿಂದೆ ಚರ್ಚ್‌ಅನ್ನು ಬಿಟ್ಟು ಹೋಗಿದ್ದ ಕೆಲವು ಸುಳ್ಳು ಸಾಕ್ಷಿಗಳನ್ನು ತಮ್ಮೊಂದಿಗೆ ಸಹಕರಿಸುವಂತೆ ಅವರು ಒಪ್ಪಿಸಿದರು. ನಷ್ಟಭರ್ತಿ ಮತ್ತು ಸಿವಿಲ್ ಕೇಸ್‌ನಲ್ಲಿ ಹಣದ ಆಮಿಷ ಬಹಳ ಆಕರ್ಷಕವಾಗಿದ್ದವು. ಮೊಕದ್ದಮೆಯನ್ನು ಎತ್ತಿಹಿಡಿಯಲು ಸಿವಿಲ್ ಮೊಕದ್ದಮೆ ಅದೇ ಐದು ಸಾಕ್ಷಿಗಳನ್ನು ಮತ್ತು ಕ್ರಿಮಿನಲ್ ವಿಚಾರಣೆಯಲ್ಲಿ ಬಳಸಲಾಗಿದ್ದ, ಮಾಜಿ ಸದಸ್ಯರೂ ಆಗಿದ್ದ ಒಬ್ಬ ಆರನೇ ಸಾಕ್ಷಿಯನ್ನು ಬಳಸಿತು. ಆದರೆ ಈ ಬಾರಿ ಸಿವಿಲ್ ಮೊಕದ್ದಮೆಯಲ್ಲಿ, ಆಕೆ ಹಣದ ತೀರ್ಪು ಅಪೇಕ್ಷಿಸುತ್ತಿದ್ದರು, ಆದ್ದರಿಂದ ತನ್ನನ್ನು ಹೆಂಡತಿಯಾಗಲು ಸಜ್ಜುಗೊಳಿಸಲಾಗುತ್ತಿತ್ತು, ಆದರೆ ತಾನು ಮೊದಲು ಪಾರಾದೆ ಎಂಬ ಹೊಸ ಆಪಾದನೆಯನ್ನು ಸೃಷ್ಟಿಸಿದರು. ಏಳನೆಯವು ಜೂನ್ 2010ರ ವರೆಗೆ ಚರ್ಚ್‌ನಲ್ಲಿದ್ದರು, ನಾನು ನಿರಪರಾಧಿ ಎಂದು ಅವರು ಇನ್ನೂ ತಿಳಿದಿದ್ದರು ಮತ್ತು ವಿಚಾರಣೆಯ ನಂತರ ನನಗೆ ಬೆಂಬಲ ನೀಡುತ್ತಿದ್ದು. ನಂತರ ಆಕೆ ಜೂನ್ ನಲ್ಲಿ ಬಿಟ್ಟುಹೋದರು. ಕೆಲವೇ ತಿಂಗಳುಗಳೊಳಗೆ, ಆಕೆ ಹಣಕ್ಕಾಗಿ ಸಿವಿಲ್ ಮೊಕದ್ದಮೆಯನ್ನು ಸೇರಿದ್ದರು. ಸಿವಿಲ್ ಮೊಕದ್ದಮೆ ಫೆಡರಲ್ ನ್ಯಾಯಾಲಯದಲ್ಲಿತ್ತು, ಆದರೆ ವಿಚಾರಣೆಗೆ ಬಹಳ ಸಮೀಪವಿದ್ದಾಗ, ಕ್ಷಿಪ್ರ ತೀರ್ಪಿಗಾಗಿ ದಾಖಲು ಮಾಡಲಾಗಿದ್ದ ಅರ್ಜಿಗಳನ್ನು ಕೊನೆಗೂ ನ್ಯಾಯಾಧೀಶರು ಪರಿಗಣಿಸಿದರು, ಮತ್ತು ಎಲ್ಲಾ ಫೆಡರಲ್ ಆಪಾದನೆಗಳನ್ನು ಕೈಬಿಡಲಾಯಿತು. ಹೀಗೆ ಮೊಕದ್ದಮೆಯನ್ನು ಮುಚ್ಚಿ ಆರ್ಕನ್ಸಾಸ್ ರಾಜ್ಯ ನ್ಯಾಯಾಲಯದಲ್ಲಿ ಪುನಃ ಮೊಕದ್ದಮೆಯನ್ನು ದಾಖಲು ಮಾಡಲಾಯಿತು. ಅವರು ನ್ಯಾಯಯುತವಾಗಿ ಹೊರಹಾಕಿದ್ದ ಎಲ್ಲಾ ಆಪಾದನೆಗಳನ್ನು ರಾಜ್ಯ ನ್ಯಾಯಾಲಯದಲ್ಲಿ ಪುನಃ ದಾಖಲಿಸಲು ನ್ಯಾಯಾಧೀಶರು ಅನುಮತಿ ನೀಡಿದರು. ಮೊಕದ್ದಮೆಯ ವಿರುದ್ಧ ಪುನಃ ಆರಂಭದಿಂದ ಹೋರಾಡಲು ನಮ್ಮ ಬಳಿ ಹಣವಿರಲಿಲ್ಲ, ಆದ್ದರಿಂದ ನಾವು ಗೈರುಹಾಜರಿಯಿಂದಾಗಿ ಸೋತೆವು" ಎಂದು ಅವರು ಹೇಳಿದರು. ನ್ಯಾಯಾಧೀಶರು ಟೋನಿಯವರ ವಿರುದ್ಧ $525 ದಶಲಕ್ಷ ಡಾಲರ್ ತೀರ್ಪನ್ನು ವಿಧಿಸಿದರು ಮತ್ತು ಚರ್ಚ್ ವಿರುದ್ಧ ಇನ್ನೂ $525 ದಶಲಕ್ಷ ಡಾಲರ್ ತೀರ್ಪನ್ನು ವಿಧಿಸಿದರು. ಕ್ರಿಮಿನಲ್ ಮೊಕದ್ದಮೆಯಲ್ಲಿ, ಸರ್ಕಾರ ಟೋನಿ ಮತ್ತು ಚರ್ಚ್‌ಅನ್ನು ಎಲ್ಲಿ ಅತಿ ಹೆಚ್ಚಾಗಿ ನೋವಾಗುತ್ತದೊ ಅಲ್ಲಿ ದಾಳಿ ಮಾಡಿದರು: ಮಕ್ಕಳು. ಮೊದಲನೆಯ ದಾಳಿಯಲ್ಲಿ ತೆಗೆದುಕೊಳ್ಳಲಾಗದ ಇತರ ಮಕ್ಕಳಿಗಾಗಿ ಅವರು ಟೋನಿಯವರ ಪ್ರತಿಯೊಂದು ಮಿನಿಸ್ಟ್ರಿ ತಾಣಗಳಲ್ಲಿ ಹುಡುಕಾಡಿದರು. ಅವರು ಮಾಜಿ ಸದಸ್ಯರ ಮತ್ತು ಯುಎಸ್‌ನಲ್ಲಿ ಇತರೆಡೆ ವಾಸಿಸುತ್ತಿದ್ದ ಬೆಂಬಲಿಗರ ಮನೆಗಳಿಗೂ ತೆರಳಿದರು, ಕೇವಲ ಪ್ಯಾಸ್ಟರ್ ಮತ್ತು ಮಿನಿಸ್ಟ್ರಿಗೆ ಅವರ ಬೆಂಬಲದ ಕಾರಣಕ್ಕಾಗಿಯೆ ಅವರ ಮಕ್ಕಳನ್ನು ತೆಗೆದುಕೊಂಡು ಹೋಗುವುದಾಗಿ ಬೆದರಿಸಿದರು.

> **ಈ ಮಿನಿಸ್ಟ್ರಿಯನ್ನು ಮುಚ್ಚಲು, ....ಈ ದೌರ್ಜನ್ಯವನ್ನು ನಡೆಸಲಾಯಿತು.**

ನೂರು ಪೊಲೀಸ್ ಅಧಿಕಾರಿಗಳು, ಮಾರ್ಷಲ್‌ಗಳು, ಎಫ್‌ಬಿಐ, ಮತ್ತು ಸ್ವಾಟ್ ತಂಡದೊಂದಿಗೆ ಸೆಪ್ಟೆಂಬರ್ 2008ರ ದಾಳಿಯಲ್ಲಿ, ಅವರು ಆ ಶನಿವಾರ ಮಧ್ಯಾಹ್ನದಂದು ಗನ್ ಬೆದರಿಕೆ ಒಡ್ಡಿ, ಅವರ ಹೃದಯಗಳ ಮೇಲೆ ಲೇಸರ್‌ಗಳನ್ನು ಗುರಿಮಾಡಿ ಆರು ಹುಡುಗಿಯರನ್ನು ಜೋಕಾಲಿಗಳಿಂದ ಕೆಳಗಿಳಿಸಿಕೊಂಡು ಹೋದರು. ಒಂದೇ ಒಂದು ಹುಡುಗಿಯ ವಿರುದ್ಧ ಟೋನಿಯವರೊಂದಿಗೆ ಅಸಮರ್ಪಕವಾದ ಯಾವುದೇ ಸಂಬಂಧವನ್ನು ರುಜುವಾತುಪಡಿಸಲು ಸಾಧ್ಯವಾಗಲಿಲ್ಲ. ಹುಡುಗಿಯರು ಸುವಾರ್ತೆಯ ಹಾಡುಗಳನ್ನು ಹಾಡುತ್ತಿದ್ದಂತೆ ಅವರನ್ನು ಒಂದು ಬಂಡಿಯಲ್ಲಿ ಸಾಗಿಸಲಾಯಿತು. ಮರುದಿನ ಬೆಳಗ್ಗೆ ಹುಡುಗಿಯರೊಂದಿಗೆ ನಡೆಸಲಾದ ಫೊರೆನ್ಸಿಕ್ ಸಂದರ್ಶನಗಳು ಯಾವ ಮಾಹಿತಿಯನ್ನೂ ನೀಡಲಿಲ್ಲ. ಒಬ್ಬ ಹರೆಯದ ಹುಡುಗಿಯು ಅಲ್ಲಿ ವಾಸಿಸುತ್ತಿದ್ದ ವಯಸ್ಕಳಾದ ಅವಳ ಸಹೋದರಿಯನ್ನು ಭೇಟಿ ಮಾಡಲು ಬಂದಿದ್ದಳು, ಆದರೂ ಅವರು ಅವಳನ್ನು ಅವಳ ಪೋಷಕರಿಗೆ ಹಿಂದಿರುಗಿಸಲು ಒಪ್ಪಲಿಲ್ಲ. ಇತರ ಐವರೊಂದಿಗೂ ಇಂಥದ್ದೇ ಪರಿಸ್ಥಿತಿಗಳಿದ್ದವು. ಅವರು ಯಾವ ತಪ್ಪನ್ನೂ ಕಂಡುಹಿಡಿಯದಿದ್ದರೂ, ಡಿಎಚ್‌ಎಸ್ ಆ ಆರು ಹುಡುಗಿಯರನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರು, ನಂತರ ನ್ಯಾಯಾಧೀಶರು ಯುಎಸ್‌ನಲ್ಲಿದ್ದ ಪ್ರತಿಯೊಂದು ತಾಣದಲ್ಲಿದ್ದ ಪ್ರತಿಯೊಂದು ಮಗುವಿಗೆ ಪಿಕ್-ಅಪ್ ಆದೇಶವನ್ನು ಹೊರಡಿಸಿದರು.

ಮೊದಲ ಆರು ಮಕ್ಕಳಿಗಾದ ಅದೇ ಗತಿಯಿಂದ ಪಾರಾಗುವ ನಿರೀಕ್ಷೆಯಲ್ಲಿ ಸಭೆಯ ಮಂದಿ ತಮ್ಮ ಮಕ್ಕಳೊಂದಿಗೆ ಪಲಾಯನ ಮಾಡಿದರು - ಎಲ್ಲವನ್ನು ಚದುರಿಸಲು ಒಂದು ಉತ್ತಮ ಮಾರ್ಗ. ಪೋಷಕರೊಂದಿಗೆ ಮಕ್ಕಳ ಎರಡು ವ್ಯಾನ್‌ಗಳನ್ನು, ಶಸ್ತ್ರಸಜ್ಜಿತ ಭಯೋತ್ಪಾದಕರ ಬೆನ್ನಟ್ಟುವಂತೆ, ಫ್ರೀವೇನಲ್ಲಿ ಕಾನೂನು ನಿರ್ಬಂಧನಾ ವಾಹನಗಳ ಒಂದು ದೊಡ್ಡ ಒಮ್ಮುಖ ಚಲನೆ ನಿಲ್ಲಿಸಿತು. ಅವರು ಆಘಾತಕ್ಕೊಳಗಾದ ಶಿಶುಗಳನ್ನು ಮತ್ತು ಅಳುತ್ತಿದ್ದ ಮಕ್ಕಳನ್ನು ಕಸಿದುಕೊಂಡರು, ಮತ್ತು ಅವರನ್ನು ಪೋಷಕರಿಗೆ ಎಂದೂ ಹಿಂದಿರುಗಿಸಲಿಲ್ಲ. ಅದು ಅಪಹರಣವಾಗಿತ್ತು. ಮಕ್ಕಳಿಗೆ ಯಾವುದೇ ಹಾನಿ ಮಾಡಿದ್ದು ಅವರಿಗೆ ಕಂಡುಬರಲಿಲ್ಲ, ಮತ್ತು ಅವರು ನಿರೀಕ್ಷಿಸಿದ್ದಂತೆ ಟೋನಿಯವರ ಮೊಕದ್ದಮೆಯಲ್ಲಿ ಬಳಸಬಹುದಾದ, ಅವರಿಗೆ ವಿರುದ್ಧವಾದ ಯಾವುದೇ ಪುರಾವೆ ಸಿಗಲಿಲ್ಲ. ತಮ್ಮ ಮಕ್ಕಳಿಗೆ ವ್ಯಾಕ್ಸಿನ್ ಚುಚ್ಚುವಿಕೆಯನ್ನು ವಿರೋಧಿಸಿದ್ದಕ್ಕೆ ಮತ್ತು ಎ ಬೇಕ ಪಠ್ಯಕ್ರಮವನ್ನು ಬಳಸಿ ತಮ್ಮ ಮಕ್ಕಳಿಗೆ ಚರ್ಚ್‌ನಿಂದ ಶಿಕ್ಷಣ ಕೊಡಿಸಿದ್ದಕ್ಕಾಗಿ ಪೋಷಕರ ಮೇಲೆ, ಮಕ್ಕಳನ್ನು ನಿರ್ಲಕ್ಷಿಸಿದ ಆರೋಪವನ್ನು ಹೊರಿಸಲಾಯಿತು. ಸಂಪೂರ್ಣ ಮಿನಿಸ್ಟ್ರಿಯನ್ನು ಧ್ವಂಸ ಮಾಡಲು ಇದೇ ಮಾರ್ಗ ಎಂದು ಸರ್ಕಾರಕ್ಕೆ ತಿಳಿದಿತ್ತು. ಈ ಮಿನಿಸ್ಟ್ರಿಯನ್ನು ಮುಚ್ಚಲು, ವ್ಯಾಟಿಕನ್ ವಿರುದ್ಧ ಟೋನಿಯವರು ಮಾತನಾಡುವುದನ್ನು ನಿಲ್ಲಿಸಲು, ಮತ್ತು ಚರ್ಚ್‌ನ ಸಂಪೂರ್ಣ ಆಸ್ತಿ ಮತ್ತು ಹಣವನ್ನು ಪಡೆಯಲು ಈ ದೌರ್ಜನ್ಯವನ್ನು ನಡೆಸಲಾಯಿತು. ಮಿನಿಸ್ಟ್ರಿಯನ್ನು ಬೆಂಬಲಿಸಿದ, ಯುಎಸ್ ಮತ್ತು ವಿಶ್ವದಾದ್ಯಂತ ಸಾಹಿತ್ಯವನ್ನು ಟೈಪ್‌ಸೆಟ್ ಮಾಡಿ, ಮುದ್ರಿಸಿ, ರವಾನಿಸಿ ಮತ್ತು ವಿತರಿಸಿದ ಜನರನ್ನು ಚೆದುರಿಸುವ ಮೂಲಕ ಅವರು ಮಿನಿಸ್ಟ್ರಿಯನ್ನು ಧ್ವಂಸ ಮಾಡಲು ಪ್ರಯತ್ನಿಸಿದರು.

ಇದು ಗೆಸ್ಟಪೊ ದೇಶವೇ? ಅವರು ಮಾಡಿರುವ ಎಲ್ಲಾ ಕೆಲಸಕ್ಕಾಗಿ ಅವರು ವ್ಯಾಟಿಕನ್‌ನಿಂದ ಎಲ್ಲಾ ಹಣವನ್ನು ಏಕೆ ತೆಗೆದುಕೊಳ್ಳುವುದಿಲ್ಲ? ಇದರ ಕುರಿತು ನ್ಯಾಯಾಲಯದಲ್ಲಿ ಒಂದು ಮೊಕದ್ದಮೆ ಇತ್ತು ಮತ್ತು ಅವರು, "ವ್ಯಾಟಿಕನ್ ಅಮೇರಿಕದಲ್ಲಿ ವ್ಯಾಪಾರ ನಡೆಸುವುದಿಲ್ಲ" ಎಂದು ಹೇಳಿದರು. ಅಲಾಮೊ ಮಿನಿಸ್ಟ್ರಿಗಳು ವಿತರಿಸುವ ಸಾಹಿತ್ಯವು, ನಮ್ಮ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಮತ್ತು ನಮ್ಮ ಸರ್ಕಾರದ ಮೇಲೆ ವ್ಯಾಟಿಕನ್ ನ ಪ್ರಭಾವವನ್ನು ಬಹಿರಂಗಪಡಿಸುತ್ತದೆ, ಮತ್ತು ಅವರ ಹತೋಟಿಯಲ್ಲಿರುವ ವಿಶ್ವ ನಿಯಂತ್ರಣ, ತಾವೇ ಏಕೈಕ ನಿಜವಾದ ಚರ್ಚ್ ಎಂದು ನಂಬುವಂತೆ ಎಲ್ಲರಿಗೂ ಹೇಗೆ ಮನವರಿಕೆ ಮಾಡಿಸುತ್ತಿದೆ ಎಂದು ತೋರಿಸುತ್ತದೆ. ಎಂದಾದರೂಒಂದು ಕುಪಂಥವಿತ್ತೆಂದರೆ, ಅದು ವ್ಯಾಟಿಕನ್!

ಮಿನಿಸ್ಟ್ರಿಯಲ್ಲಿನ ಹೆತ್ತವರು, ಮಿನಿಸ್ಟ್ರಿಯನ್ನು ಬಿಡುವ ಅಥವಾ ತಮ್ಮ ಪೋಷಕರ ಹಕ್ಕುಗಳನ್ನು ಕೊನೆಗೊಳಿಸಿ ತಮ್ಮ ಮಕ್ಕಳನ್ನು ಶಾಶ್ವತವಾಗಿ ಕಳೆದುಕೊಳ್ಳುವ ತೀರಾ ಅನ್ಯಾಯದ ಆಯ್ಕೆಯನ್ನು ಎದುರಿಸಬೇಕಾಯಿತು. ಮಕ್ಕಳು ಮತ್ತು ಪೋಷಕರಿಬ್ಬರ ವಿನಾಶ ಎಂದರೆ ಅದು ಸೌಮ್ಯೋಕ್ತಿಯಾಗುತ್ತದೆ. ನಂತರ ಮಕ್ಕಳು ಸರ್ಕಾರಿ ಏಜೆನ್ಸಿಗಳಿಂದ ಸಂಪೂರ್ಣವಾಗಿ ಬ್ರೇನ್‌ವಾಶ್ ಮಾಡಲ್ಪಟ್ಟರು ಮತ್ತು "ಆಪ್ತ ಸಲಹೆ" ನೀಡಲಾಯಿತು ಮತ್ತು ಅವರು ತಮ್ಮ ಸ್ವಂತ ಪೋಷಕರ ವಿರುದ್ಧ ಹಗೆತನ ಬೆಳೆಸಿಕೊಂಡರು, ಮತ್ತು ಈಗ ಅವರು ಒಂದೊಮ್ಮೆ ತಾವು ಪ್ರೀತಿಸುತ್ತಿದ್ದ ಚರ್ಚ್‌ಅನ್ನು ದ್ವೇಷಿಸುತ್ತಾರೆ.

ಟೋನಿ ತಮ್ಮ ಕಾರಾಗೃಹದ ಕೊಠಡಿಯಿಂದ ಕೇಳುವ ಪ್ರಶ್ನೆ ಇದು: "ಕ್ಯಾಥೊಲಿಕ್ ಕುಪಂಥದಲ್ಲಿ ಮಕ್ಕಳ ಶೋಷಣೆಯ ಅಗಾಧ ಪುರಾವೆ ಇರುವಾಗ, ಮಕ್ಕಳನ್ನು ತಮ್ಮ ಶಾಲೆಗಳಿಗೆ, ತಮ್ಮ ಚರ್ಚ್‌ಗಳಿಗೆ, ತಮ್ಮ ಅನಾಥಾಶ್ರಮಗಳಿಗೆ, ಕಾನ್ವೆಂಟ್‌ಗಳಿಗೆ, ಇತ್ಯಾದಿಗಳಿಗೆ ಹೋಗುವುದರಿಂದ ಏಕೆ ತಡೆಯಲಾಗುತ್ತಿಲ್ಲ? ಪ್ರತಿ ದಿನ ಶೋಷಣೆ ಮಾಡುವ ಕುಪಂಥಕ್ಕೆ ತಮ್ಮ ಮಕ್ಕಳನ್ನು ಪುನಃ ಕಳುಹಿಸುವ ಕ್ಯಾಥೊಲಿಕ್ ಪೋಷಕರು, ತಮ್ಮ ಪೋಷಕರ ಹಕ್ಕುಗಳ ಅಂತ್ಯವನ್ನು ಮತ್ತು ತಮ್ಮ ಮಕ್ಕಳನ್ನು ತೆಗೆದುಕೊಂಡು ಹೋಗುವುದನ್ನು ಏಕೆ ಎದುರಿಸುತ್ತಿಲ್ಲ?"

ವೈಯಕ್ತಿಕವಾಗಿ, ಅಕಾಲಿಕವಾಗಿ ಜನಿಸಿದ ನನ್ನ ತಮ್ಮನಿಗೆ 6 ತಿಂಗಳಾಗಿದ್ದಾಗ, ನನ್ನ ತಾಯಿ ಲುಕೇಮಿಯದಿಂದ ನಿಧನ ಹೊಂದಿದರು ಮತ್ತು ನನ್ನ ತಂದೆ ಹಲವಾರು ಬಿಲ್‌ಗಳನ್ನು ಪಾವತಿ ಮಾಡಬೇಕಾಗಿತ್ತು. ನಾವು ವಾಸಿಸುತ್ತಿದ್ದಲ್ಲಿಗೆ ಹತ್ತಿರದಲ್ಲಿ ಒಂದು ಕ್ಯಾಥೊಲಿಕ್ ಅನಾಥಾಶ್ರಮವಿತ್ತು, ಅಲ್ಲಿಗೆ ಈ ಎಲ್ಲಾ ಮಕ್ಕಳನ್ನು ತಂದರು. ಒಬ್ಬ ಮಾನ್ಸಿನ್ಯರ್ ನಮ್ಮ ಮನೆಗೆ ಬಂದರು, ಆದರೆ ನನ್ನ ತಂದೆಗೆ ನೆರವು ನೀಡುವ ಬದಲು, ಆತ ನನ್ನನ್ನು ಮತ್ತು ನನ್ನ ತಮ್ಮನನ್ನು ನಮ್ಮ ತಂದೆಯಿಂದ ಬೇರ್ಪಡಿಸಿ ನಮ್ಮನ್ನು ಕ್ಯಾಥೊಲಿಕ್ ಅನಾಥಾಶ್ರಮಕ್ಕೆ ಸೇರಿಸಬೇಕೆಂದಿದ್ದರು. ನನ್ನ ತಂದೆ ಮಾನ್ಸಿನ್ಯರ್ ಅವರನ್ನು ಥಟ್ಟನೆ ಹಿಡಿದು ಗೋಡೆಗೆ

*ಗ್ರೆಗ್ ಆಂಥನಿ ಅವರ ತನಿಖಾ ಜರ್ನಲ್ ಅನ್ನು ನೇರವಾಗಿ firstamendmentradio.com ನಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಸಂಜೆ 6 ಗಂಟೆ ನಿರ್ದಿಷ್ಟ ಸಮಯದಲ್ಲಿ,9 ET ಕೇಳಿ*

ಎಸೆದರು, ಅವರಿಗೆ ಶಾಪ ಹಾಕಿ, ಮೆಟ್ಟಿಲುಗಳ ಕೆಳಗೆ ಕಾಲಿನಿಂದ ಒದ್ದರು. ವ್ಯಾಟಿಕನ್ ಬಗ್ಗೆ ನನಗೂ ಹಾಗೇ ಅನಿಸುತ್ತದೆ. ಅವರ ತಿಕಕ್ಕೆ ಒದ್ದು ನಿಮ್ಮ ಮನೆಯಿಂದ ಹೊರಹಾಕಬೇಕು. ನನ್ನ ತಂದೆ ಹಾಗೇ ಮಾಡಿದರು, ಮತ್ತು ನಾವು ಬಹಳ ಆರೋಗ್ಯಕರವಾಗಿ ಮತ್ತು ಸಂತೋಷದಿಂದ ಬೆಳೆದೆವು, ಮತ್ತು ನನ್ನ ತಮ್ಮ ಈಗ ಒಬ್ಬ ಬಹಳ ಯಶಸ್ವಿ ವ್ಯಾಪಾರಿಯಾಗಿದ್ದಾನೆ. ಪುನಃ ಎಂದೂ ಕ್ಯಾಥೊಲಿಕ್ ಚರ್ಚ್ ಒಳಗೆ ಕಾಲಿಡುವುದಿಲ್ಲ ಎಂದು ನನ್ನ ತಂದೆ ಶಪಥ ಮಾಡಿದರು, ಅವರು ಎಂದೂ ಕಾಲಿಡಲಿಲ್ಲ. ಮತ್ತು ಅವರು ನನ್ನ ತಮ್ಮನನ್ನು ಎಂದೂ ಕ್ಯಾಥೊಲಿಕ್ ಶಾಲೆಗೆ ಕಳುಹಿಸಲಿಲ್ಲ. ನನ್ನನ್ನು ಕ್ಯಾಥೊಲಿಕ್ ಶಾಲೆಯಿಂದ ಹೊರಗೆಳೆಯಲು ಅವರಿಗೆ ಅನುಮತಿ ನೀಡಬೇಕೆಂದು ನನ್ನ ತಂದೆ ನನ್ನನ್ನು ಕೇಳಿದರು, ಆದರೆ ನನ್ನ ಗೆಳೆಯರು ಅಲ್ಲಿದ್ದ ಕಾರಣ ಮತ್ತು ನಾನು ಆಗಷ್ಟೇ ನನ್ನ ತಾಯಿಯನ್ನು ಕಳೆದುಕೊಂಡಿದ್ದರಿಂದ ನನ್ನನ್ನು ಅಲ್ಲಿಯೆ ಇರಲು ಬಿಡಬೇಕೆಂದು ನಾನು ಅವರನ್ನು ಬೇಡಿಕೊಂಡೆನು.

ಟೋನಿಯವರ ವಿಚಾರಣೆಯ ಮುಂಚೆ, ಸರ್ಕಾರವು, ಒಹೈಯೋದ ಆಲ್ಬಾನಿಯಲ್ಲಿ ವೆಲ್‌ಸ್ಪ್ರಿಂಗ್ ರಿಟ್ರೀಟ್ ಎಂಬ ದೂರದ ತಾಣದಲ್ಲಿ ತೀವ್ರವಾದ ಎರಡು-ವಾರಗಳ ಡಿಪ್ರೊಗ್ರ್ಯಾಮಿಂಗ್‌ಗಾಗಿ ಅವರು ಟೋನಿ ವಿರುದ್ಧ ಬಳಸಲು ಯೋಜಿಸಿದ್ದ ಮೂರು ಸಾಕ್ಷಿಗಳಲ್ಲಿ ಪ್ರತಿಯೊಬ್ಬರಿಗೆ $5,000.00 ಕ್ಕೂ ಹೆಚ್ಚು ಹಣವನ್ನು ಕಲ್ಟ್ ಅವೇರ್‌ನೆಸ್ ನೆಟ್‌ವರ್ಕ್‌ಗೆ ಪಾವತಿ ಮಾಡಿದರು. ಅವರ ಸ್ವಂತ ವೆಬ್‌ಸೈಟ್ ಪ್ರಕಾರ, ಅವರ "ತೀವ್ರವಾದ ಕಾರ್ಯಕ್ರಮ" "ಪ್ರತಿ ವಾರ 10 ತೆರಪಿ ಗಂಟೆಗಳನ್ನು ಮತ್ತು 15-20 ಗಂಟೆಗಳ ಸಾಮೂಹಿಕ ಕಾರ್ಯಾಗಾರಗಳನ್ನು ಒದಗಿಸುತ್ತದೆ." ಆದ್ದರಿಂದ ಈ ಸಾಕ್ಷಿಗಳು ಪ್ರಾಸಿಕ್ಯೂಟರ್‌ಗಳು, ಎಫ್‌ಬಿಐ, ಮತ್ತು ಪೊಲೀಸರೊಂದಿಗೆ ಹೊಂದಿದ್ದ ಎಲ್ಲಾ ಇತರ "ಅವಧಿಗಳು" ಅಲ್ಲದೆ ಆ ಎರಡು ವಾರಗಳಲ್ಲಿ 50-60 ಗಂಟೆಗಳ "ತೆರಪಿ"ಯನ್ನು ಕೂಡ ಪಡೆದರು. ಸರ್ಕಾರವು ಅವರ ರೌಂಡ್ ಟ್ರಿಪ್‌ಗಳಿಗೆ ಹಣ ಒದಗಿಸಿತು, ಮತ್ತು ತಾಯಿ ಆಪ್ತ ಸಲಹೆ ಪಡೆಯುತ್ತಿದ್ದಾಗ, ಒಬ್ಬ ಸಾಕ್ಷಿಯ ಮಗುವಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕಾಗಿ $1,500.00ಕ್ಕೂ ಹೆಚ್ಚು ಹಣವನ್ನು ಪಾವತಿ ಮಾಡಿತು. ಅವರು ಇಲ್ಲದಿರುವಾಗ ಪಾವತಿ ಮಾಡಲಾಗದ ಕಾರ್ ವಿಮೆ, ಇತ್ಯಾದಿಗಳಂತಹ ಬಿಲ್‌ಗಳ ಪಾವತಿ ನೆಪದಲ್ಲಿ ಸರ್ಕಾರವು ಸಾಕ್ಷಿಗಳಿಗೂ ಹಣ ಕೊಟ್ಟಿತು. ವೆಲ್‌ಸ್ಪ್ರಿಂಗ್‌ನ ಮಾಜಿ ಮುಖ್ಯಸ್ಥ, ಪಾಲ್ ಮಾರ್ಟಿನ್, ಖುದ್ದಾಗಿ ಈ ಸಾಕ್ಷಿಗಳ ಮೇಲೆ ಕೆಲಸ ಮಾಡಿದರು. ಇದು ಡಿಸೆಂಬರ್ 2008ರಲ್ಲಿ ನಡೆಯಿತು, ಮತ್ತು ತದನಂತರ ಸ್ವಲ್ಪವೇ ಸಮಯದಲ್ಲಿ, ಶ್ರೀ ಮಾರ್ಟಿನ್ ಅಸ್ವಸ್ಥರಾದರು, ಅವರಿಗೆ ಲುಕೇಮಿಯ ಇರುವುದು ಕಂಡುಬಂದು ಹಲವು ತಿಂಗಳುಗಳ ನಂತರ ನಿಧನ ಹೊಂದಿದರು.

ಯುಎಸ್‌ನಲ್ಲಿ ಇತರ ವಿಚಾರಣೆಗಳಲ್ಲಿ, ವೆಲ್‌ಸ್ಪ್ರಿಂಗ್‌ನಲ್ಲಿರುವ ಕಲ್ಟ್ ಅವೇರ್‌ನೆಸ್ ನೆಟ್‌ವರ್ಕ್‌ನಿಂದ ಡಿಪ್ರೊಗ್ರ್ಯಾಮ್ ಆದವರ ಸಾಕ್ಷಿಯನ್ನು ನ್ಯಾಯಾಲಯದಿಂದ ಹೊರಗೆ ಬಿಸಾಡಲಾಯಿತು. ಪ್ರತಿವಾದಿಯ ಪಕ್ಷದಿಂದ ಯಾರಾದರೊಬ್ಬರು ಸಾಕ್ಷಿಯೊಂದಿಗೆ ಮಾತನಾಡಿದರೂ ಸಹ, ಸಾಕ್ಷಿಯ ಮೇಲೆ ಪ್ರಭಾವ ಬೀರುವ ಪ್ರಯತ್ನಕ್ಕಾಗಿ ಅವರ ವಿರುದ್ಧ ಗಂಭೀರ ಆಪಾದನೆಯನ್ನು ಮಾಡಬಹುದಾಗಿದೆ. ಆದರೂ, ಟೋನಿಯವರ ಪ್ರಸಂಗದಲ್ಲಿ, ಸರ್ಕಾರವು ಸಾಕ್ಷಿಗಳನ್ನು ಡಿಪ್ರೊಗ್ರ್ಯಾಮ್ ಮಾಡಲು ಅವರನ್ನು ಈ ಜಾಗಕ್ಕೆ ಕಳುಹಿಸಬಹುದು. ಬಹುಶಃ ಜನರು ಒಳಗೆ ಹೋಗುವಾಗ ಯಾವುದೇ ಪಕ್ಷವನ್ನು ವಹಿಸದಿರಬಹುದು ಮತ್ತು ಹೊರ ಬರುವಾಗ ಬಹಳ ಪ್ರತಿಕೂಲವಾಗಬಹುದು. ಈ ಮೊಕದ್ದಮೆಯಲ್ಲಿ ಇದೊಂದು ಮುಖ್ಯವಾದ ಅಂಶ.

ಬ್ರಿಟಿಷ್ ಕೊಲಂಬಿಯಾದ ಪ್ರೊಟೆಸ್ಟೆಂಟ್ ಮಿಷನ್ ಸುದ್ದಿಪತ್ರಿಕೆಯಲ್ಲಿ, ಪೋಪ್ ಜಾನ್ ಪಲ್ II ಅವರು ಕೆನಡಗೆ ಭೇಟಿ ನೀಡುವುದು ನಿಗದಿಯಾಗಿದ್ದಾಗ ಕೆನಡಗೆ ಹೋಗಿ ಸುವಾರ್ತಾ ಸಾಹಿತ್ಯವನ್ನು ವಿತರಿಸಿದ ಮಿನಿಸ್ಟ್ರಿಯ ಸದಸ್ಯರ ಕುರಿತು ಒಂದು ಲೇಖನವಿತ್ತು. "ಪೋಪ್ ಬಂದ ದಿನ, ಸಹೋದರರನ್ನು ಬಂಧಿಸಲಾಯಿತು. ಯಾವುದೇ ಆರೋಪಗಳನ್ನು ಮಾಡಲಿಲ್ಲ, ಯಾವುದೇ ಕಾರಣಗಳನ್ನು ಕೊಡಲಿಲ್ಲ, ಆದರೆ ಪೋಪ್ ಕೆನಡದಿಂದ ಹೊರಡುವ ದಿನದ ವರೆಗೆ ಅವರನ್ನು ಕಾರಾಗೃಹದಲ್ಲಿ ಇಡಲಾಯಿತು, ನಂತರ ಯಾವುದೇ ವಿವರಣೆ ಅಥವಾ ಕ್ಷಮೆಯಾಚನೆ ಇಲ್ಲದೆ ಅವರನ್ನು ಬಿಡುಗಡೆ ಮಾಡಲಾಯಿತು." ರೋಮನ್ ಕ್ಯಾಥೊಲಿಕ್ ವ್ಯವಸ್ಥೆಯನ್ನು ಬಹಿರಂಗಪಡಿಸಿದ ಸಾಹಿತ್ಯದ ವಿತರಣೆ ಟೋನಿ ಅಲಾಮೊ ಮತ್ತೊಮ್ಮೆ ಕಾರಾಗೃಹದಲ್ಲಿರಲು ನಿಜವಾದ ಕಾರಣ ಎಂದು ತನಗೆ ತಿಳಿದಿದೆ ಎಂದು ಆ ಲೇಖನದ ಲೇಖಕರು ಹೇಳುತ್ತಾರೆ. ಅಧಿಕಾರಿಗಳು ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಮಕ್ಕಳು ದೈಹಿಕವಾಗಿ ಮತ್ತುಲೈಂಗಿಕವಾಗಿ ದೌರ್ಜನ್ಯಕ್ಕೊಳಗಾಗುವ ಬಗ್ಗೆ ಅಧಿಕಾರಿಗಳಿಗೆ ಅಷ್ಟೇ ಕಾಳಜಿ ಇದ್ದಿದ್ದರೆ, ಬ್ರಹ್ಮಚಾರಿ ಪಾದ್ರಿಗಳಿಂದ ಸಹಸ್ರಾರು ಮಕ್ಕಳು ಲೈಂಗಿಕವಾಗಿ ಮತ್ತು ದೈಹಿಕವಾಗಿ ಅತ್ಯಾಚಾರಕ್ಕೊಳಗಾಗಿದ್ದಾರೆ, ಚಿತ್ರಹಿಂಸೆಗೆ ಒಳಗಾಗಿದ್ದಾರೆ, ಮತ್ತು ಸಾವಿಗೂ ಗುರಿಯಾಗಿದ್ದಾರೆ ಎಂಬುದು ರುಜುವಾತುಪಡಿಸಲಾದ ಸತ್ಯಾಂಶವಾದ್ದರಿಂದ, ಅವರು ಪ್ರತಿಯೊಂದು ರೋಮನ್ ಕ್ಯಾಥೊಲಿಕ್ ಸಂಸ್ಥೆಯನ್ನು ಏಕೆ ಮುಚ್ಚುವುದಿಲ್ಲ? ಒಬ್ಬ ಪಾದ್ರಿಯ ಲೈಂಗಿಕ ಬಲಾತ್ಕಾರ ಮತ್ತು ಅತ್ಯಾಚಾರಕ್ಕೆ ಬಲಿಯಾದವರಲ್ಲಿ ಒಬ್ಬರಿಂದ, ನ್ಯಾಯವನ್ನು ಅಪೇಕ್ಷಿಸುತ್ತ, ಆಪಾದಿತರಾದ ಈ ವಿಕೃತ ಕಾಮಿಯನ್ನು ಗೋಪ್ಯವಾಗಿ ಮತ್ತೊಂದು ಮಠಕ್ಕೆ ಅಥವಾ ಮತ್ತೊಂದು ಚರ್ಚ್‌ಗೆ, ಅವರು ಮತ್ತೊಂದು ಜಾಗದಲ್ಲಿ ತನ್ನ ಅತ್ಯಾಚಾರನ್ನು ಮುಂದುವರಿಸಲು ಸಾಧ್ಯವಾಗುವಂತೆ, ಸಾಗಿಸಲಾಗಿದೆ ಎಂದು ಆ ಅತ್ಯಾಚಾರಕ್ಕೆ ಬಲಿಯಾದವರು ಕಂಡುಕೊಳ್ಳುವುದರ ಬಗ್ಗೆ ನೀವು ಎಷ್ಟು ಬಾರಿ ಕೇಳಿದ್ದೀರಿ? ಎಲ್ಲಿದೆ ನ್ಯಾಯ? ಪಾದ್ರಿಗಳಿಂದ ಅತ್ಯಾಚಾರಕ್ಕೊಳಗಾಗುತ್ತಿರುವ ಆ ಎಲ್ಲಾ ಮಕ್ಕಳ ಬಗ್ಗೆ ಈಗಾಗಲೆ ತಿಳಿದುಕೊಂಡಿರುವ ಕ್ಯಾಥೊಲಿಕ್ ಪೋಷಕರು ಈ ವಿಕೃತ ಶಿಶುಕಾಮಿಗಳ ಬಳಿ ತಮ್ಮ ಮಕ್ಕಳನ್ನು ಹೇಗೆ ಕಳುಹಿಸುತ್ತಲೇ ಇರುತ್ತಾರೆ? ಅವರ ಸ್ವಾಭಾವಿಕ ಒಲವು ಎಲ್ಲಿದೆ? ಇದು ಉಪೇಕ್ಷೆ ಅಲ್ಲವೆ? ಅವರು ಶಿಶುಕಾಮದ ಬಗ್ಗೆ ತಿಳಿದುಕೊಂಡಿದ್ದಾರೆ ಮತ್ತು ಪ್ರತಿದಿನ ಸುದ್ದಿಪತ್ರಿಕೆಗಳಲ್ಲಿ ಅದರ ಬಗ್ಗೆ ಓದಲು ಅವರಿಗೆ ಸಾಧ್ಯ. ಮಕ್ಕಳ ಲೈಂಗಿಕ ದೌರ್ಜನ್ಯದ ಈ ಬೃಹತ್ ಗುಂಪಿನ ಬಗ್ಗೆ ಅಧಿಕಾರಿಗಳಿಗೆ ಏಕೆ ಕಾಳಜಿ ಇಲ್ಲ? ಟೋನಿ ಅಲಾಮೊ ಕಥೆಯಲ್ಲಿರುವಂತೆ, ಇಬ್ಬಗೆ ನೀತಿ ಇದೆ, ಒಂದು ರೋಮ್‌ಗಾಗಿ, ಮತ್ತೊಂದು ಉಳಿದ ಜಗತ್ತಿಗಾಗಿ.

2009ರಲ್ಲಿ, ಶೇನ್ ಎಂಬ ಹೆಸರಿನ ವ್ಯಕ್ತಿಯು (ಅರ್ಕನ್ಸಾಸ್ ಮಾನವ ಸೇವೆಗಳ ವಿಭಾಗವನ್ನು ಮಾನವ ಸಂಕಟದ ವಿಭಾಗ ಎಂದು ಕರೆಯುವವರು), ಡಿಎಚ್‌ಎಸ್ 35 ಮಕ್ಕಳನ್ನು ಕದ್ದರು, ಟೋನಿ ಅಲಾಮೊ ಅವರನ್ನು ಕಾರಾಗೃಹದಲ್ಲಿ ಬಂಧಿಸಿದರು, ಮತ್ತು ಹೀಗೆ ಮಾಡುವ ಮೂಲಕ ಪರಿಣಾಮಕಾರಿಯಾಗಿ ಬೈಬಲ್ ಅನ್ನು ವಿಚಾರಣೆಗೆ ಗುರಿ ಮಾಡುತ್ತಿದ್ದಾರೆ ಎಂದು ಬರೆದರು. ಅಲಾಮೊ ಮಿನಿಸ್ಟ್ರಿ ಒಂದು ಕುಪಂಥ ಅಥವಾ ಒಳಪಂಗಡವಲ್ಲ, ಬದಲಿಗೆ ಅದೊಂದು ಬೈಬಲ್ ಅನ್ನು ನಂಬುವ ಶಾಂತಯುತವಾದ ಕ್ರೈಸ್ತಮತೀಯರ ಸಮುದಾಯ. ಅವರು ವಿಶ್ವದೆಲ್ಲೆಡೆ ಬೈಬಲ್ ಅನ್ನು ಉಪದೇಶಿಸುವುದರಲ್ಲಿ ಸಕ್ರಿಯರಾಗಿದ್ದಾರೆ. ಮಕ್ಕಳಿಗೆ ವ್ಯಾಕ್ಸಿನ್ ಚುಚ್ಚುವಿಕೆ ಮಾಡಿರಲಿಲ್ಲ ಮತ್ತು ಮನೆಯಲ್ಲಿಯೆ ಕಲಿಯುತ್ತಿರುವುದಾಗಿ ಸರ್ಕಾರದಲ್ಲಿ ನೋಂದಣಿ ಆಗಿರಲಿಲ್ಲ ಎಂಬುದು ಈ ಮಕ್ಕಳನ್ನು ಅವರ ಪೋಷಕರಿಂದ ಕಸಿದುಕೊಳ್ಳುವುದಕ್ಕಾಗಿ ನ್ಯಾಯಾಧೀಶರು ನೀಡಿದ ಕಳಪೆ ಕಾರಣ. ಈ ಅಪಹರಣಗಳ ಹಿಂದಿರುವ ನಿಜವಾದ ಸತ್ಯವೇನೆಂದರೆ ಅಲಾಮೊ ಮಿನಿಸ್ಟ್ರಿಗಳು, ವ್ಯಾಟಿಕನ್ "ರಹಸ್ಯಮಯ ಬಾಬೆಲೆಂಬ ಮಹಾ ನಗರಿ, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ" (ಪ್ರಕಟನೆ 17:5) ಎಂದು ಉಪದೇಶಿಸುವುದು ಆಗಿದೆ.

ಅವರು ಟೋನಿಯವರನ್ನು ಹಿಡಿಯಲು ಏಕೈಕ ಕಾರಣವೆಂದರೆ ಅವರು ಬಹಳ ಯಶಸ್ವಿಯಾಗಿದ್ದಾರೆ. ಅವರ ಮಿನಿಸ್ಟ್ರಿ ಬಹಳ ಜನಪ್ರಿಯವಾಗಿದೆ, ಮತ್ತು ಅವರು ತನ್ನ ಸಂದೇಶವನ್ನು ಸಹಸ್ರಾರು ಜನರಿಗೆ ತಲುಪಿಸಿದರು. ಟೋನಿಯವರು ತನ್ನ ಮನೆಯಲ್ಲಿ ಕುಳಿತುಕೊಂಡು 20 ಜನರೊಂದಿಗೆ ಮಾತನಾಡುತ್ತಿದ್ದರೆ, ಅವರು ಅವರಿಗೆ ಎಂದೂ ತೊಂದರೆ ಕೊಡುತ್ತಿರಲಿಲ್ಲ, ಆದರೆ ತಮ್ಮ ಗುಟ್ಟು ರಟ್ಟಾಗುವುದು ಅವರಿಗೆ ಬೇಕಿಲ್ಲ, ಆದುದರಿಂದಲೆ ಅವರಿಗೆ ಹೀಗಾಗಿದೆ. ಇದಕ್ಕಿರುವ ಒಂದೇ ಪರಿಹಾರವೆಂದರೆ, ಈ ಕಥೆಯ ಬಗ್ಗೆ ಮುಖ್ಯವಾಹಿನಿಯ ಮಾಧ್ಯಮದಲ್ಲಿ ನೀವು ಕೇಳಿದ್ದನ್ನು ನಂಬದಿರುವುದು ಏಕೆಂದರೆ ಅವರು ದಬ್ಬಾಳಿಕೆಯ ಬಗ್ಗೆ ನಿಮಗೆ ಹೇಳಲಿಲ್ಲ; ಬಹಳಷ್ಟು ವಿಷಯಗಳನ್ನು ಅವರು ನಿಮಗೆ ಹೇಳಲಿಲ್ಲ. ಅವರು ಅಪರಾಧಿ ಎಂದು ತೀರ್ಮಾನವಾಗುವಂತೆ ಮಾಡಿದರು ಮತ್ತು ಈ ಕಥೆಯನ್ನು ಕೇವಲ ಪ್ರಾಸಿಕ್ಯೂಟರ್‌ನ ದೃಷ್ಟಿಯಿಂದ ಮಾತ್ರ ಹೇಳಿದರು ಮತ್ತು ಅದನ್ನು ಕೇಳಿದ ಎಲ್ಲರೂ "ಅವರು ಅಪರಾಧಿಯಾಗಿರಬೇಕು" ಎಂದು ಹೇಳುತ್ತಾ ನಡೆದುಹೋಗುವರು. ಸರ್ಕಾರ, ಮಾಧ್ಯಮ, ಮತ್ತು ವ್ಯಾಟಿಕನ್ ಜೊತೆಗೂಡಿ ಕೆಲಸ ಮಾಡುವ ರೀತಿಯೆ ಇದು.

ಗ್ರೆಗ್ ಅವರನ್ನು ನೇರವಾಗಿ ಕೇಳಿ **firstamendmentradio.com** ನಲ್ಲಿ ಪ್ರತಿ ಸೋಮವಾರದಿಂದ ಶುಕ್ರವಾರದ ವರೆಗೆ ಸಂಜೆ 6 ರಿಂದ 7 ಗಂಟೆಗೆ ನಿರ್ದಿಷ್ಟ ಸಮಯದಲ್ಲಿ. ಟೋನಿ ಅಲಾಮೊ ಅವರ ಮೇಲೆ ಸುಳ್ಳು ಆಪಾದನೆಗಳ ಬಗ್ಗೆ ಮತ್ತು ಅವರ ಮಿನಿಸ್ಟ್ರಿಯನ್ನು ಕೆಡವಲು ವ್ಯಾಟಿಕನ್ ನೇತೃತ್ವದ ನ್ಯೂ ವರ್ಲ್ಡ್ ಆರ್ಡರ್ ನ ಸಂಚಿನ ಬಗ್ಗೆ ಪ್ರತಿ ವಾರ ಅಪ್‌ಡೇಟ್‌ಗಳನ್ನು ಕೊಡುತ್ತಾರೆ. ಇತರ ಬೈಬಲ್ ನಂಬುವ ಕ್ರೈಸ್ತಮತೀಯ ಮಿನಿಸ್ಟ್ರಿಗಳು ಹೇಗೆ ಅಪಾಯದಲ್ಲಿವೆ ಮತ್ತು ಹಿಂದೆ ಇತರರು ಅಲಾಮೊ ಮಿನಿಸ್ಟ್ರಿಗೆ ಆಗಿರುವ ಗತಿಯನ್ನೆ ಎದುರಿಸಿದ್ದವು ಎಂಬುದನ್ನು ಅವರು ದಾಖಲಿಸುವುದನ್ನು ಕೇಳಿ. ಗ್ರೆಗ್ ಅವರ ಸಂದೇಶವನ್ನು ಬೇಗನೆ ದೇಶಾದ್ಯಂತ ಕಿರುತರಂಗಗಳ ರೇಡಿಯೊದಲ್ಲಿ ಪ್ರಸಾರ ಮಾಡಲಾಗುತ್ತದೆ. ಅವರು ನಿಮ್ಮ ಮಿನಿಸ್ಟ್ರಿಯಲ್ಲಿ ಅಥವಾ ಚರ್ಚ್‌ನಲ್ಲಿ ಮಾತನಾಡಬೇಕೆಂದು ನೀವು ಬಯಸಿದರೆ, ಮಾತನಾಡುವ ಕಾರ್ಯಕ್ರಮವನ್ನು ಏರ್ಪಡಿಸುವುದಕ್ಕಾಗಿ ವಿವರಗಳಿಗಾಗಿ ಗ್ರೆಗ್ ಅವರನ್ನು Greg at gregbeacon@gmail.com ನಲ್ಲಿ ಸಂಪರ್ಕಿಸಿ.